**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,</u>**

**<u>ಪೊನ್ನಂಪೇಟೆ</u>**

**ಸಿ.ಸಿ. ನಂ. 529/2025 ಫ್ರಾ.ಸಾ – 5**

**ಚಾ.ಸಾ –7**

**<u>ದಿನಾಂಕಃ 16.06.2026. ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

| | | |
|---|---|---|
| ಸಾಕ್ಷಿಯ ಹೆಸರು | : | ಸತೀಶ್ |
| ತಂದೆಯ ಹೆಸರು | : | ಸಣ್ಣಪ್ಪ |
| ವಯಸ್ಸು | : | 53 ವರ್ಷ |
| ಉದ್ಯೋಗ | : | PDO |
| ವಾಸ ಸ್ಥಳ | : | ಕೊಟ್ಟಗೇರಿ ಗ್ರಾಮ |

**<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ–</u>**

ನಾನು 2023 ರಿಂದ ಇಲ್ಲಿಯ ತನಕ ಟಿ ಶೆಟ್ಟಿಗೇರಿ ಗ್ರಾಮದಲ್ಲಿ PDO ಆಗಿ ಕರ್ತವ್ಯ ನಿರ್ವಹಿಸಿಕೊಂಡಿರುತ್ತೇನೆ.

ದಿ. 24.01.2025 ರಂದು ಪೊಲೀಸರು ವೆಸ್ಟ್ ನೆಮ್ಮಲೆ ಗ್ರಾಮದಲ್ಲಿ ಚಾಸಾ 2 ರವರ ಗದ್ದೆಯ ಹತ್ತಿರ ಅವರ ಕುಟುಂಬಸ್ಥರ ಮನೆಗೆ ಹೋಗುವ ಮಣ್ಣು ದಾರಿ ಇದಿಯಾ ಎಂದು ಮಾಹಿತಿ ಕೋರಿದರು, ಅದರಂತೆ ನಾನು ಗದ್ದೆಯ ಹತ್ತಿರ ಅವರ ಕುಟುಂಬಸ್ಥರ ಮನೆಗೆ ಹೋಗುವ ಮಣ್ಣು ದಾರಿ ಇದೆ ಎಂದು ದಿ. 29.01.2025 ರಂದು ದೃಡೀಕರಣ ಪತ್ರ ನೀಡಿರುತ್ತೇನೆ. ಸಾಕ್ಷಿಯು ಮನವಿ ಮತ್ತು ತಾನು ಕೊಟ್ಟ ಮಾಹಿತಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ ಪಿ 5 ಮತ್ತು 6 ಎಂದು, ಸಹಿಗಳನ್ನು ನಿ ಪಿ 6(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಸಿ. ಪಿ. ಪಿ. ವಕೀಲರಿಂದಃ</u>**

ನಿ ಪಿ 6 ರಲ್ಲಿರುವ ಮಾಹಿತಿ ಸರಿ ಇದೆ ಎಂದು ದೃಢೀಕರಿಸಲು ಯಾವುದೇ ಪಂಚಾಯಿತಿ ದಾಖಲೆಗಳನ್ನು ಕೊಟ್ಟಿಲ್ಲ. ರಸ್ತೆ ಇರುವ ಸರ್ವೆ ನಂ. ಜಮೀನು ನಮ್ಮ ಕಚೇರಿಯಿಂದ ಹೇಳಲಾಗುವುದಿಲ್ಲ. 2019 ರಲ್ಲಿ ಈ ರಸ್ತೆಯು ಕಾಮಗಾರಿ ಆಗಿದ್ದು ಯಾವ

**C.C. No. 529/2025** **PW –**

ಕಾಮಗಾರಿ ಯೋಜನೆ ಅಡಿಯಲ್ಲಿ ಅದು ನಿರ್ಮಾಣಗೊಂಡಿತ್ತು ಗೊತ್ತಿಲ್ಲ. ಪಂಚಾಯಿತಿ ದಾಖಲೆಗಳು ಕೊಡದೇ, ಸರ್ವೆ ನಂ. ತಿಳಿಸದೆ, ಸ್ಥಳಕ್ಕೆ ಹೋಗಿ ಬೇಟಿ ನೀಡದೆ ಈ ನಿ ಪಿ 6 ದಾಖಲೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**Sd/-**

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ